Reg. No. | | | | | | | | | | |

# BSCKAL 153/FNDKAL 153/HRDKAL 153

**ಗುಣಾಂಕ ಆಧಾರಿತ ಎರಡನೆಯ ಸೆಮಿಸ್ಟರ್ ಬಿ.ಎಸ್ಸಿ./ಬಿ.ಎಸ್ಸಿ (ಎಫ್.ಎನ್.ಡಿ.)/**

**ಬಿ.ಎ. (ಎಚ್.ಆರ್.ಡಿ.) ಪದವಿ ಪರೀಕ್ಷೆ, ಮೇ/ಜೂನ್ 2016**

**ಕನ್ನಡ ಭಾಷಾ ಪತ್ರಿಕೆ – II**

**(2013-2014 ಮತ್ತು ನಂತರದವರಿಗಾಗಿ)**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 80

## ಭಾಗ – 1 : ಕಾವ್ಯ

I. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಭೀಷ್ಮರ ಪಟ್ಟಾಭಿಷೇಕ ಸಂದರ್ಭದಲ್ಲಿ ಉಂಟಾದ ವಿವಾದ ಮತ್ತು ಅದರ ಪರಿಣಾಮಗಳನ್ನು ವಿವರಿಸಿ.

2) ಅಕ್ಕಮಹಾದೇವಿಯ ಬದುಕಿನ ಚಿತ್ರ ಅಮೃತ ಮುಹೂರ್ತ ಕವಿತೆಯಲ್ಲಿ ಹೇಗೆ ಬಂದಿದೆ ? ವಿವರಿಸಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಬಡತನದ ಬಡಬಾಗ್ನಿ ಕವನದ ಆಶಯವನ್ನು ಗುರುತಿಸಿ.

2) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವನ್ನು ಚಂದ್ರಶೇಖರ ಪಾಟೀಲರು ಹೇಗೆ ವಿವರಿಸಿದ್ದಾರೆ ?

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×3=6)**

1) ಕುಂತಿಯ ಬಡತನದ ಚಿತ್ರ.

2) ದಾಸರ ಕೀರ್ತನೆಯಲ್ಲಿ ಬರುವ ಋಣದ ಕಲ್ಪನೆ.

3) ಕೆ.ಎಸ್. ನರಸಿಂಹಸ್ವಾಮಿ.

II. ಅ) **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿರಿ : **(1×5=5)**

1) ಬಂದು ಕುರುಕ್ಷೇತ್ರದೊಳಳ
ವೊಂದಿರೆ ನಮ್ಮೊಳ್ ಕಡಂಗಿ ಮಿಗೆ ತಳ್ತಿರಿಯ
ಲ್ಕೆಂದಾನುಂ ಬಂದಿರ್ದರಿ
ದೇಂ ದಾಯಿಗತನಮನೆಮಗಮವರ್ ತೋರಿದಪರ್

ಪು.ತಿ.ನೋ.

2) ಹಸಿರೆಲೆಗಳಲಿ ಮಾಸದ ಕಣ್ಣು ಥಳಥಳಿಸಿ
ತಪ್ಪು ಹೆಜ್ಜೆಗಳನ್ನು ಸರಿಪಡಿಸಲಿ
ನೆಲದಾಳದಲ್ಲಿ ಬೇರಿಳಿದ ಮರಗಳು ಬದುಕಿ
ಎಲ್ಲ ಕಾಲಗಳಲ್ಲಿ ಹೂವ ತೊಡಲಿ

ಆ) **ಎರಡು** ಸಾಲುಗಳಿಗೆ ಸಂದರ್ಭವನ್ನು ಸೂಚಿಸಿ ಸ್ವಾರಸ್ಯವನ್ನು ವಿವೇಚಿಸಿ. **(2×3=6)**

1) ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನ
2) ನಿರ್ಭಯ ಚೆಲುವಂಗೊಲಿದವಳು
3) ಹೋರಾಟದ ಹೊರತು ಏನು ದೊರೆಯುವುದಿಲ್ಲ ಏಳಿರೆಲ್ಲ

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(5×1=5)**

1) ರಾಧೇಯ ಎಂದರೆ ಯಾರು ?
2) ಪುರಂದರದಾಸರ ಮೂಲ ಹೆಸರೇನು ?
3) ಅಕ್ಕಮಹಾದೇವಿಯ ಇಷ್ಟದೈವ ಯಾವುದು ?
4) ಸಂಕ್ರಮಣ ಪತ್ರಿಕೆಯ ಸಂಪಾದಕರು ಯಾರು ?
5) ಪಂಪನ ಧಾರ್ಮಿಕ ಕೃತಿ ಯಾವುದು ?

## ಭಾಗ – 2 : ಗದ್ಯ

IV. ಅ) **ಒಂದಕ್ಕೆ** ಉತ್ತರಿಸಿರಿ : **(1×8=8)**

1) ಜನಪದ ವೈದ್ಯಕೀಯದ ಸಮಸ್ಯೆ ಮೂಲಿಕೆ ಬಳ್ಳಿ ಲೇಖನದಲ್ಲಿ ಹೇಗೆ ಅನಾವರಣಗೊಂಡಿದೆ ?
2) ಅಸೂಯೆ ಮತ್ತು ಪ್ರೇಮದ ಪರಿಕಲ್ಪನೆ ಸ್ನೋವೈಟ್ ಕಥೆಯಲ್ಲಿ ಹೇಗೆ ಮೂಡಿ ಬಂದಿದೆ ?

ಆ) **ಒಂದಕ್ಕೆ** ಉತ್ತರಿಸಿರಿ : **(1×8=8)**

1) ಭಾರತದಲ್ಲಿನ ಅಸ್ಪೃಶ್ಯತೆಯ ಬಗೆಗಿನ ಸಮಸ್ಯೆಯನ್ನು ಲೇಖಕರು ಹೇಗೆ ಗುರುತಿಸಿದ್ದಾರೆ ?
2) ವೈಜ್ಞಾನಿಕ ಕ್ಷೇತ್ರದಲ್ಲಿನ ಸಮಸ್ಯೆಗಳು ವಿಜ್ಞಾನ ಪ್ರಶ್ನೆ ಲೇಖನದಲ್ಲಿ ಹೇಗೆ ಬಿಂಬಿತವಾಗಿದೆ ?

V. **ಒಂದಕ್ಕೆ** ಉತ್ತರಿಸಿರಿ : **(1×5=5)**

1) ಕೃಷಿ ವಲಯದ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ಗುರುತಿಸಿ.
2) ವಿಜ್ಞಾನ ಮತ್ತು ಸಾಹಿತ್ಯದ ಹೊಣೆಗಾರಿಕೆಯನ್ನು ವಿವರಿಸಿ.

VI. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(4×1=4)**

1) ಯುದ್ಧ ವಿರೋಧಿ ಚಳುವಳಿ ಎಂದು ಯಾವುದನ್ನು ಗುರುತಿಸುತ್ತೇವೆ ?

2) ಅಸ್ಪೃಶ್ಯರು ಕೇರಳದಲ್ಲಿ ಉಪ್ಪಿಗೆ ಯಾವ ಪದವನ್ನು ಬಳಸಬೇಕಿತ್ತು ?

3) ಕ್ಲಾಡಿಯಸ್ ಯಾವ ದೇಶದ ವಿಜ್ಞಾನಿ ?

4) ತಬರನ ಕಥೆ ಚಲನಚಿತ್ರಕ್ಕೆ ರಾಷ್ಟ್ರಮಟ್ಟದ ಯಾವ ಪುರಸ್ಕಾರ ದೊರಕಿದೆ ?

## ಭಾಗ – 3 : ನಾಟಕ

VII. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ನಾಟಕದ ಆರಂಭದಲ್ಲಿ ಬರುವ ಉಳ್ಳಾಲ್ತಿ ಮತ್ತು ಈಶ್ವರ ಇವರ ನಡುವೆ ನಡೆಯುವ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

2) ತುಳು ಸಂಸ್ಕೃತಿಯ ವಿವರಗಳು ನಾಟಕದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

ಆ) **ಒಂದಕ್ಕೆ** ಉತ್ತರಿಸಿರಿ : **(1×6=6)**

1) ಬೃಹಸ್ಪತಿಯ ಪಾತ್ರವನ್ನು ಪರಿಚಯಿಸಿ.

2) ಮಾಣಿಯ ಪಾತ್ರದ ವಿವರಗಳನ್ನು ಗುರುತಿಸಿ.

VIII. **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿ : **(2×2=4)**

1) ಈ ಕೋಶರರ ನಾಡಿನ ಸೌಭಾಗ್ಯ ಕಳೆದು ಹೋಯಿತಲ್ಲ

2) ನಿನ್ನಂತಹ ಪುಣ್ಯಾತ್ಮರಿಗೆ ವರಕೊಡುವುದೇ ಒಂದು ಪುಣ್ಯ

3) ಕೆಲ್ಸ ಕೊಡ್ತಾನಂತೆ ಕಳಂಜ ಎಂಬ ಊರಿಗಿಳಿದ ಮಾರಿ

IX. ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) ಮೂರು ಹೆಜ್ಜೆ ಮೂರು ಲೋಕ ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಿದವರು ಯಾರು ?

2) ಷಂಗಂ ತಮಿಳಗಂ ಕೃತಿಯನ್ನು ಬರೆದವರು ಯಾರು ?

---